**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ.584 /2017**

**ದಿನಾಂಕಃ11-07-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

ಪಿ.ಡಬ್ಲ್ಯುಃ2 ಸಿ.ಡಬ್ಲುಃ 4

ಸಾಕ್ಷಿಯ ಹೆಸರು : ಮೋಹನ್ ಕುಮಾರ್
ತಂದೆಯ ಹೆಸರು : ಚಂದ್ರಶೇಖರ್
ವಯಸ್ಸು : 48 ವರ್ಷ
ಉದ್ಯೋಗ : ಉಪನ್ಯಾಸಕರು
ವಾಸ : ಕಡೂರು

**ಮುಖ್ಯ ವಿಚಾರಣೆಃ ಮಾನ್ಯ ಸಸಅ ಅವರಿಂದಃ-**

ಚಾಸಾ.1 ನನ್ನ ಹೆಂಡತಿ. ಚಾಸಾ.5 ನನ್ನ ನಾದಿನಿ. ದಿಃ30-9-2015 ರಂದು ನಾನು ಕಾಲೇಜಿಗೆ ಹೋಗಿದ್ದೆ. ಆಗ ಚಾಸಾ.1 ನಮ್ಮ ಮನೆಯಲ್ಲಿ ಇದ್ದರು. ಮಧ್ಯಾಹ್ನ 3-30 ಗಂಟೆ ಸಮಯದಲ್ಲಿ ಚಾಸಾ.1 ಮನೆಯ ಕಾಂಪೌಂಡ್ ಒಳಗೆ ಗೋಧಿಯನ್ನು ಒಣಗಿಸುತ್ತಿದ್ದಾಗ ಒಬ್ಬ ವ್ಯಕ್ತಿ ಬಂದು ಕುಮಾರ್ ಎಂಬುವವರ ಮನೆ ಎಲ್ಲಿ ಎಂದು ವಿಳಾಸವನ್ನು ಕೇಳಿರುತ್ತಾನೆ. ಅದಕ್ಕೆ ಚಾಸಾ.1 ಕುಮಾರ್ ಎಂಬುವವರ ಮನೆ ಇಲ್ಲಿ ಇಲ್ಲ ಎಂದು ತಿಳಿಸಿದ್ದಕ್ಕೆ ಸದರಿ ವ್ಯಕ್ತಿ ಅವರ ಮನೆ ಇಲ್ಲಿಯೇ ಇದೆ ಎಂದು ಹೇಳಿ ಚಾಸಾ.1 ರವರು ಮನೆಯ ಒಳಗೆ ಹೋಗುವಾಗ ಅವರ ಕತ್ತಿನಲ್ಲಿದ್ದ ಸರವನ್ನು ಕಿತ್ತುಕೊಂಡಿರುತ್ತಾನೆ. ಮನೆಯ ಹೊರಗೆ ಒಬ್ಬ ಬೈಕಿನಲ್ಲಿ ಕಾಯುತ್ತಿದ್ದು ಸದರಿ ವ್ಯಕ್ತಿ ಮತ್ತು ಸರವನ್ನು ಕಿತ್ತುಕೊಂಡ ವ್ಯಕ್ತಿ ಇಬ್ಬರೂ ಬೈಕಿನಲ್ಲಿ ಓಡಿಹೋಗಿರುತ್ತಾರೆ. ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಚಾಸಾ,5 ರವರ ಮನೆ ಇರುತ್ತದೆ. ನಂತರ ನನಗೆ ಮತ್ತು ಚಾಸಾ.5 ರವರಿಗೆ ಸದರಿ ವಿಚಾರವನ್ನು ತಿಳಿಸಿರುತ್ತಾರೆ. ನಂತರ ನಾನು ಮನೆಗೆ ಬಂದು ಪರಿಶೀಲಿಸಿ ಠಾಣೆಗೆ ದೂರನ್ನು ನೀಡಿರುತ್ತೇನೆ. ಕಳೆದು ಹೋದ ಬಂಗಾರದ ಸರದ ಮೌಲ್ಯ ಅಂದಾಜು ಮೌಲ್ಯ ಒಂದೂವರೆ ಲಕ್ಷ ಆಗುತ್ತದೆ. ಈ ಕುರಿತು ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ.

**ಪಾಟೀ ಸವಾಲುಃ ೨ ನೇ ಆರೋಪಿ ಪರ ಹೆಚ್.ವಿ.ಜಿ. ವಕೀಲರಿಂದ**

ಘಟನೆ ಆಗಿ 15 ನಿಮಿಷಗಳ ನಂತರ ನಾನು ಸ್ಥಳಕ್ಕೆ ಬಂದಿರುತ್ತೇನೆ. ದೂರನ್ನು ಚಾಸಾ.1 ನೀಡಿರುತ್ತಾರೆ. ಚಾಸಾ,1 ರವರ ಹೇಳಿಕೆಯ ಮೇರೆಗೆ ನನ್ನ ಘಟನೆಯ ಬಗ್ಗೆ ಮಾಹಿತಿ ಗೊತ್ತಾಗಿದೆ ಎಂದರೆ ಸರಿ. ಮಹಜರು ಮಾಡುವ ಕಾಲಕ್ಕೆ ನಾನು ಸ್ಥಳದಲ್ಲಿ ಇರಲಿಲ್ಲ. ನಾನು 2ನೇ ಆರೋಪಿಯನ್ನು ಇದೇ ಮೊದಲನೇ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. 2ನೇ ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**೧ನೇ ಆರೋಪಿ ಪರ ವಕೀಲರು ಗೈರು ಹಾಜರು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

( ಸಿ.ಎನ್.ಚಂದನ್ )
ಪ್ರಃಪ್ರಃದಃನ್ಯಾಃದಂ.,ರವರು,
ಕಡೂರು.